ನಕ್ಷತ್ರ ಪಟ

ಜನ್ನು ಪ್ರಪಂಚ

# ಸಮುದ್ರಕ್ಕೆ ಇಷ್ಟೊಂದು ಉಪ್ಪು ಯಾರು ಸುರಿದರು?



**ಸೌಮ್ಯ ಪ್ರಭು ಕಲ್ಯಾಣ್ಕರ್**

ಕಲೆ: ಸಂತೋಷ್ ಸಸಿಹಿತ್ಲು

'ಮರಳು ಇನ್ನೂ ಬಿಸಿಯಿದೆ' ಎಂದು ಪಿನ್ನಮ್ಮ ಹೇಳುವುದು ಕೇಳಿ ಮಕ್ಕಳಿಗೆ ಅದು ಮಣ್ಣಲ್ಲ, ಮರಳು ಅನ್ನುವುದು ತಿಳಿಯಿತು. ಬಾಗಿ ಕೈಯಲ್ಲಿ ಹಿಡಿದರೆ ಅದು ಜಾರಿ ಜಾರಿ ಹೋಗುತ್ತಿತ್ತು. ನಡೆದು ಹೋಗುತ್ತಿದ್ದಂತೆ ಎದುರಿಗೆ ಕಾಣಿಸುತ್ತಿದ್ದ ನೀರು ಅಗಲ, ಅಗಲ, ಅಗಲವಾಗುತ್ತಲೇ ಹೋಯಿತು. ಕಣ್ಣು ಹಾಯಿಸುವವರೆಗೂ ನೀರು, ನೀರು, ನೀರು. ಜನ್ನುವಷ್ಟು ಎತ್ತರಕ್ಕೆ ಏರಿ, ಅಬ್ಬರಿಸಿ ಶಬ್ದ ಮಾಡುತ್ತಾ ಬಂದು ಕೊನೆಗೆ ಸಣ್ಣವಾಗಿ, ಪಾಪದವರ ಹಾಗೆ ಆಗಿ ಮರಳಿನ ಮೇಲೆ ಚಿತ್ರ ಬಿಡಿಸುತ್ತಾ ಮೆತ್ತಗೆ ಹಿಂದೆ ಸರಿಯುವ ನೀರಿನ ಅಲೆಗಳು. ಒಂದು ಮುಗಿದರೆ ಇನ್ನೊಂದು, ಅದು ಮುಗಿದರೆ ಮತ್ತೊಂದು! ನಿಲ್ಲುತ್ತಲೇ ಇಲ್ಲ! ಎಡ, ಬಲಕ್ಕೆ ತಿರುಗಿದರೆ ಓರೆ ಕೋರೆ ಮರಳಿನ ಅಂಚಿಗೆ ಕೊನೆಯೆಂಬುದೇ ಇಲ್ಲದ ಹಾಗೆ ಅಂಟಿಕೊಂಡ ನೀರಿನ ಮಾಲೆ.

ಅಬ್ಬಾ! ಎಷ್ಟು ಚೆಂದ! ಮರಳಿನ ಬೆಚ್ಚಗಿನ ಕಾಲ್ಚೀಲ ಧರಿಸಿ ನಿಂತ ಜನ್ನು ನೋಡಿ ನೋಡಿ ಇಟ್ಟ. ಸಮುದ್ರ ಹೀಗೆಲ್ಲಾ ಇರುತ್ತದೆಯೆಂದು ಅವನಿಗೆ ಗೊತ್ತಿರಲೇ ಇಲ್ಲ. ಸುತ್ತಲಿದ್ದವರೆಲ್ಲಾ ಮರೆತು ಹೋಗಿದ್ದರು, ಅಷ್ಟು ದೊಡ್ಡ ಸಮುದ್ರದ ಎದುರು ತಾನೊಂದು ಸಣ್ಣ ಇರುವೆ ಅಂತಲೂ ಅವನಿಗೆ ಅನಿಸಿತು. ತನ್ನದೇ ಲೋಕದಲ್ಲಿ ಕಳೆದು ಹೋಗಿದ್ದ ಅವನನ್ನು ಎಚ್ಚರಿಸಿದ್ದು ಪುಟ್ಟಿಯ ಕಿರುಚಾಟ.

ಸಮುದ್ರ ನಂಗಿಷ್ಟ, ಹೋಗೋಣಾ ಅಂತೆಲ್ಲಾ ದೊಡ್ಡಮ್ಮನ ಹತ್ತಿರ ಹೇಳಿದವಳಿಗೆ ಅದರ ಅಗಾಧತೆ ನೋಡಿ ಹೆದ್ರಿಕೆಯಾಗಿತ್ತು. ತನ್ನಮ್ಮನ ಕಾಲ ಹಿಂದೆ ನಿಂತು ಕಿರುಚುತ್ತಿದ್ದಳು, ಅವಳಿಗೆ ಮುಂದೆ ಕಾಲಿಡಲೂ ಆಗುತ್ತಿರಲಿಲ್ಲ. ಚಿಕ್ಕಪ್ಪ ಅವಳನ್ನೆತ್ತಿಕೊಂಡು ಸಮಾಧಾನ ಮಾಡಿದರೂ ಅವಳು ಕೇಳುತ್ತಿರಲಿಲ್ಲ, ಹೋಗೋಣವೆಂಬಂತೆ ಕೊಸರಾಡುತ್ತಿದ್ದಳು. ಕೊನೆಗೆ ಚಿಕ್ಕಪ್ಪ ಮತ್ತು ಅವಳು ಒಂದಷ್ಟು ದೂರ ಹೋಗಿ ಮರಳಿನ ಮೇಲೆ ಕೂತರು. ಜನ್ನು ತನ್ನಮ್ಮನನ್ನು ನೋಡಿದರೆ ಅವಳೂ, ಪಿನ್ನಮ್ಮ ನೀರಿನಲೆಗಳಲ್ಲಿ ಕಾಲು ಹಾಕುತ್ತಾ ಪುಟ್ಟ ಮಕ್ಕಳ ಹಾಗೆ ಆಟವಾಡುತ್ತಿದ್ದಾರೆ! ಅಮ್ಮ ಹೀಗೆಲ್ಲಾ ನಗುತ್ತಾಳೆ, ಆಟವಾಡುತ್ತಾಳೆ ಎಂದು ಗೊತ್ತಿರದ ಜನ್ನು ಬೆರಗಾಗಿ ಅವಳ ಕಡೆ ನೋಡುತ್ತಾ ನಿಂತ. ತಿಮ್ಮುವೂ ಇವನಂತೆಯೇ ನಿಂತು ಅವರಿಬ್ಬರನ್ನೂ ನೋಡುತ್ತಿದ್ದ. ಜಾನು ಬಂದು ಚಪ್ಪಲು ಬಿಡುವಂತೆ ಹೇಳಿ ಇಬ್ಬರ ಕೈ ಹಿಡಿದು ಆ ಅಲೆಗಳ ಕಡೆ ಎಳೆದುಕೊಂಡು ಹೋದಳು. ನಿಂತ